ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

ದೂರವಾಣಿ :0824 – 2423913
0824 – 2411242
ಇ–ಮೇಲ್:dcf_mngt@yahoo.co.in
dcfmng@aranya.gov.in

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಗಳೂರು ವಿಭಾಗ, ಪಿ.ಡಬ್ಲ್ಯೂ.ಡಿ.ಕಟ್ಟಡ, ನೆಹರೂ ಮೈದಾನದ ಬಳಿ ಮಂಗಳೂರು 575001

ಸಂಖ್ಯೆ: ಭೂಶಾಖೆ:ಕೆವಿಸ್ಟೇಶನ್:11/2004–05

ದಿನಾಂಕ: 29–01–2018

ನೋಂದಾಯಿತ ಅಂಚೆ ಮೂಲಕ

ಇವರಿಗೆ,

ಕಾರ್ಯ ನಿರ್ವಾಹಕ ಇಂಜಿನಿಯರ್
ವಿದ್ಯುತ್
ಮೆಸ್ಕಾಂ , ಪುತ್ತೂರು ಉಪ ವಿಭಾಗ

ಮಾನ್ಯರೇ,

ವಿಷಯ : Diversion of 0.80ha of Reserved Forest land in Sy.No 125/P of Sampaje village, Sulya Taluk, Dakshina Kannada District, Mangalore Division for construction of 33/11 KV substation at Rajarampura in favour of the Executive Engineer ( Elec) , Mescom Puttur Division.

ಉಲ್ಲೇಖ
1 ನಿಮ್ಮ ಪತ್ರ ಸಂಖ್ಯೆ: ಕಾನಿಇಂ(ವಿ)ಪು.ವಿ/3070–73/2017–18 ದಿನಾಂಕ: 07–07–2017.
2 ಈ ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ:15–09–2017
3 ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ , ಮಂಗಳೂರು ವೃತ್ತ, ಮಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:ಎ3/ಸಿಆರ್.11/2005–06 ದಿನಾಂಕ:03–10–2017 ಮತ್ತು 19–12–2017.
4 ಈ ಕಛೇರಿ ಪತ್ರ ಸಂಖ್ಯೆ: ಭೂ ಶಾಖೆ:ಜಿಎಲ್:133/ಎಫ್‌ಸಿ/2006–07 ದಿನಾಂಕ:31–03–2015, 18–05–2015 ಮತ್ತು 16–10–2017.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ವಿಭಾಗ ವ್ಯಾಪ್ತಿಯಿಂದ ಸುಳ್ಯ ತಾಲೂಕು ಸಂಪಾಜೆ ಗ್ರಾಮ ರಾಜರಾಮ್‌ಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆವಿ ವಿದ್ಯುತ್ ಉಪ ಕೇಂದ್ರಕ್ಕೆ ಸಂಪಾಜೆ ಮೀಸಲು ಅರಣ್ಯದ 0.80 ಹೆ. ಅರಣ್ಯ ಭೂಮಿಯನ್ನು ಅರಣ್ಯೇತ್ತರ ಉದ್ದೇಶಕ್ಕಾಗಿ ಬಳಸಲು ನಿಗದಿತ ನಮೂನೆಯಲ್ಲಿ ಹಾಗೂ Forestclearance .nic.in ವೆಬ್‌ಸೈಟ್‌ನಲ್ಲಿ ಪ್ರಸ್ತಾವನೆಯನ್ನು ಉಲ್ಲೇಖ (1) ರಲ್ಲಿ ಸಲ್ಲಿಸಿರುತ್ತೀರಿ.

ಸದ್ರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ನೀವು ಸಲ್ಲಿಸಿದ ಪ್ರಸ್ತಾವನೆಯನ್ನು ಸ್ಥಳ ಪರಿಶೀಲನಾ ವರದಿಯೊಂದಿಗೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಗುರುತಿಸಿರುವ ಪ್ರದೇಶದ ಬಗೆಗಿನ ಪ್ರಮಾಣ ಪತ್ರವನ್ನು ಒಳಗೊಂಡ ಮೂಲ ಪ್ರಸ್ತಾವನೆಯನ್ನು ಉಲ್ಲೇಖ (2) ರಲ್ಲಿ ಸಲ್ಲಿಸಲಾಗಿರುತ್ತದೆ.

ಆದರೆ ಉಲ್ಲೇಖ (3) ರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರ ಪತ್ರದಲ್ಲಿ ಪಂಜ ವಲಯದ ಎಣ್ಮೂರು ಕಾದಿರಿಸಿದ ಅರಣ್ಯದೊಳಗೆ ಹೇಮಳ ಹ್ಯಾಮ್ಲೆಟ್ ಯೋಜನೆಯಡಿ ವಿದ್ಯುತ್ ಲೈನ್ ಎಳೆಯುವ ಸಂದರ್ಭ ಉಪಯೋಗಿ ಸಂಸ್ಥೆಯಾದ ಮೆಸ್ಕಾಂ ಸುಳ್ಯ ಇವರು ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರ ಉಲ್ಲಂಘನೆ ಮಾಡಿರುವ ಬಗ್ಗೆ ನಿಮ್ಮಿಂದ ಸ್ಪಷ್ಟ ಅಭಿಪ್ರಾಯವನ್ನು ಪಡೆದು ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಿದಲ್ಲಿ ಸುಳ್ಯ ತಾಲೂಕು ಸಂಪಾಜೆ ಗ್ರಾಮ ರಾಜರಾಮ್‌ಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆವಿ ವಿದ್ಯುತ್ ಉಪ ಕೇಂದ್ರದ ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

ಮೇಲಿನ ವಿಚಾರದ ಬಗ್ಗೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮೆಸ್ಕಾಂ, ಸುಳ್ಯ ಇವರಿಗೆ ಉಲ್ಲೇಖ (4) ರಲ್ಲಿ ಈ ಕಛೇರಿಯಿಂದ ಹಲವು ಬಾರಿ ಪತ್ರವನ್ನು ಬರೆದು ಅರಣ್ಯ ಸಂರಕ್ಷಣಾ ಕಾಯಿದೆಯನ್ನು ಉಲ್ಲಂಘನೆ ಮಾಡಿ ವಿದ್ಯುತ್ ಲೈನ್ ಎಳೆದು ಕಾಮಗಾರಿ ಪೂರ್ಣಗೊಳಿಸಿದ ಅಧಿಕಾರಿಯವರ ವಿವರವನ್ನು ನೀಡಲು ಕೋರಿದ್ದರೂ ಈವರೆಗೂ ಸಲ್ಲಿಸಿರುವುದಿಲ್ಲ. ಹಾಗೂ ಯಾವುದೇ ರೀತಿಯಲ್ಲಿ ಸ್ಪಂದನೆಯನ್ನು ನೀಡಿರುವುದಿಲ್ಲ. ಆದ್ದರಿಂದ ಈ ಹಂತದಲ್ಲಿ ಪಂಜ ವಲಯದ ಎಣ್ಮೂರು ಕಾದಿರಿಸಿದ ಅರಣ್ಯದೊಳಗೆ ಹೇಮಳ ಹ್ಯಾಮ್ಲೆಟ್ ಯೋಜನೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಮೆಸ್ಕಾಂ ಅಧಿಕಾರಿಗಳು ಅರಣ್ಯ ಸಂರಕ್ಷಣಾ ಕಾಯಿದೆಯನ್ವಯ ನೆಟ್ ಪ್ರೆಸೆಂಟ್ ವ್ಯಾಲ್ಯೂ (NPV) ಪರಿಹಾರಾತ್ಮಕ ನೆಡುತೋಪುಗಳ ವೆಚ್ಚ ( CA Land ) ಹಾಗೂ ಯಾವುದೇ ವಿಧಿಸಿದ ದಂಡನೆಯನ್ನು ಪಾವತಿಸಲು ಬದ್ಧರಿರುವುದಾಗಿ ಸೂಕ್ತ ಮುಚ್ಚಳಿಕೆ ಪತ್ರವನ್ನು ಈ ಕಛೇರಿಗೆ ಸಲ್ಲಿಸಿದ್ದಲ್ಲಿ ಸುಳ್ಯ ತಾಲೂಕು ಸಂಪಾಜೆ ಗ್ರಾಮ ರಾಜರಾಮ್‌ಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆವಿ ವಿದ್ಯುತ್ ಉಪ ಕೇಂದ್ರದ ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗುವುದು ಎಂದು ಈ ಮೂಲಕ ನಿಮಗೆ ತಿಳಿಯಪಡಿಸಲಾಗಿದೆ.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಮಂಗಳೂರು ವಿಭಾಗ , ಮಂಗಳೂರು

ಪ್ರತಿಯನ್ನು ಗೌರವಗಳೊಂದಿಗೆ ಮುಖ್ಯ ಅರಣ್ಯ ಸಂರಕ್ಷಣಧಿಕಾರಿ, ಮಂಗಳೂರು ವೃತ್ತ, ಮಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸುಬ್ರಹ್ಮಣ್ಯ ಉಪ ವಿಭಾಗ, ಸುಳ್ಯ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ವಲಯ ಅರಣ್ಯ ಅಧಿಕಾರಿ, ಪಂಜ ವಲಯ, ಪಂಜ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ಕಾರ್ಯ ನಿರ್ವಾಹಕ ಇಂಜಿನಿಯರ್, ವಿದ್ಯುತ್, ಮೆಸ್ಕಾಂ, ಸುಳ್ಯ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ. ( ನೋಂದಾಯಿತ ಅಂಚೆ ಮೂಲಕ)